**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ ಉಡುಪಿ**

**ಸೆಷನ್ಸ್ ಕೇಸ್ ನಂಃ 5/2019** ಪಿ.ಡಬ್ಲ್ಯುಃ 3

ಸಿ.ಡಬ್ಲ್ಯುಃ 3

| | |
|---|---|
| ಸಾಕ್ಷಿದಾರರ ಹೆಸರು | ನಾರಾಯಣ ಆಚಾರಿ |
| ತಂದೆಯ ಹೆಸರು | ಶ್ಯಾಮ ಆಚಾರಿ |
| ವಯಸ್ಸು | 57 ವರ್ಷ |
| ಉದ್ಯೋಗ | ಚಿನ್ನದ ಕೆಲಸ |
| ವಿಳಾಸ | ಪಡುಬಿದ್ರೆ |

ದಿನಾಂಕಃ 25-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ಕಳೆದ 18 ವರ್ಷಗಳಿಂದ ಪಡುಬಿದ್ರೆಯ ಕೆಳಗಿನ ಪೇಟೆಯಲ್ಲಿ ಧನಲಕ್ಷ್ಮೀ ಜ್ಯುವೆಲ್ಲರ್ಸ ಎಂಬ ಚಿನ್ನ-ಬೆಳ್ಳಿ ಸಾಮಾಗ್ರಿಗಳ ಅಂಗಡಿಯನ್ನು ನಡೆಸಿಕೊಂಡು ಬರುತ್ತಿದ್ದೇನೆ. ಚಾಸಾ-4 ಇವರು ನನ್ನ ಅಂಗಡಿಯ ಪಕ್ಕದಲ್ಲಿ ಮೊಬೈಲ್ ಅಂಗಡಿ ಇಟ್ಟು ಕೊಂಡಿದ್ದಾರೆ. ಚಾಸಾ-1, ಕರ್ನಾಟಕ ಬ್ಯಾಂಕ್ ನ ಎಟಿಎಂನ ಸೆಕ್ಯುರಿಟಿ, ಅವರು ಈಗ ತೀರಿದ್ದಾರೆ. ಚಾಸಾ-2 ಗೊತ್ತು. 2018 ರ ಸೆಪ್ಟಂಬರ್ ತಿಂಗಳಿನಲ್ಲಿ ಬೆಳಿಗ್ಗೆ 5.30 ಗಂಟೆಗೆ ಚಾಸಾ-2 ನನಗೆ ಕರೆ ಮಾಡಿ, ನನ್ನ ಅಂಗಡಿಯ ಬೀಗವನ್ನು ಯಾರೋ ಮುರಿದಿದ್ದಾರೆ ಎಂದು ತಿಳಿಸಿದ್ದರು. ಕೂಡಲೇ ನಾನು ಅಂಗಡಿಯ ಬಳಿ ಹೋದಾಗ, ಅಲ್ಲಿ ಚಾಸಾ-1 ಮತ್ತು 2 ಇದ್ದರು, ನನ್ನ ಅಂಗಡಿಯನ್ನು ಪರಿಶೀಲಿಸಿದಾಗ, ಬೀಗವನ್ನು ಮುರಿಯಲಾಗಿದ್ದು, ನಾನು ಒಳಗಡೆ ಹೋಗಿ ನೋಡಿದಾಗ, ಸುಮಾರು 8 ಗ್ರಾಂ ಚಿನ್ನಾಭರಣ, 250 ಗ್ರಾಂ ನಷ್ಟು ಬೆಳ್ಳಿಯ ಆಭರಣ ಕಳವು ಮಾಡಿಕೊಂಡು ಹೋಗಿದ್ದರು. ಚಾಸಾ-4 ಇವರ ಮೊಬೈಲ್ ಅಂಗಡಿಯಲ್ಲಿ ಸಹ ಮೊಬೈಲ್ ಗಳು ಸುಲಿಗೆಯಾಗಿದ್ದು ಕಂಡುಬಂದಿತ್ತು.

2) ಆ ಬಗ್ಗೆ ನಾನು ಚಾಸಾ-1 ರವರನ್ನು ವಿಚಾರಿಸಿದಾಗ, ರಾತ್ರಿ ಎಟಿಎಂ ಕರ್ತವ್ಯದಲ್ಲಿದ್ದಾಗ, 4-5 ಜನ ವ್ಯಕ್ತಿಗಳು ಎಟಿಎಂಗೆ ಬಂದು, ಅವರಿಗೆ ಚಾಕು ತೋರಿಸಿ, ಬೆದರಿಸಿ, ಬಾಯಿಗೆ ಬಟ್ಟೆ ಕಟ್ಟಿ ಎಟಿಎಂನಿಂದ ಹೊರಗೆ ಎಳೆದುಕೊಂಡು ಬಂದು, ಕೈಕಾಲುಗಳನ್ನು ಬಟ್ಟೆಗಳಿಂದ ಕಟ್ಟಿ, ಅವರನ್ನು ಪೊದೆಗೆ ಎಸೆದು, ಆತನಲ್ಲಿ ಇದ್ದ ಒಂದು ಸ್ಯಾಮಸಂಗ್ ಮೊಬೈಲ್, ನಗದು ಹಣ ರೂಃ 400ನ್ನು ಸುಲಿಗೆ ಮಾಡಿಕೊಂಡು ಹೋಗಿರುವುದಾಗಿ ತಿಳಿಸಿದ್ದರು.

3) ನಂತರ ಈ ಬಗ್ಗೆ ಚಾಸಾ-1 ಪೊಲೀಸರಿಗೆ ದೂರು ಕೊಟ್ಟಿರುತ್ತಾರೆ. ಚಾಸಾ-1 ಈಗ ಮೃತಪಟ್ಟಿರುತ್ತಾರೆ. ಆ ದೂರಿಗಾಗಿ ನನ್ನನ್ನು ವಿಚಾರಣೆ ಮಾಡಿದ್ದರು. ಅದೇ ದಿನ ಪೊಲೀಸರು ಸ್ಥಳ ತನಿಖೆಗಾಗಿ ಎಟಿಎಂ ಬಳಿ ಹಾಗೂ ನನ್ನ ಮತ್ತು ಚಾಸಾ-2 ಇವರ ಅಂಗಡಿಯ ಬಳಿ ಬಂದಿದ್ದರು. ನಾನು ಹಾಗೂ ಚಾಸಾ-1, 2, 4, ಸ್ಥಳಗಳನ್ನು ತೋರಿಸಿದ ಮೇರೆಗೆ, ಪೊಲೀಸರು ನಿಪಿ-2ರಂತೆ ಮಹಜರು ಮಾಡಿ, ನಮ್ಮ ಸಹಿ ಪಡೆದಿದ್ದರು. ನಿಪಿ-2ರಲ್ಲಿ ನನ್ನ ಸಹಿ **ನಿಶಾನೆ ಪಿ-2(ಸಿ)** ಎಂದು ಗುರುತಿಸಿದ್ದೇನೆ.

4) ಇದಾದ ಸುಮಾರು 6 ತಿಂಗಳ ನಂತರ ಪೊಲೀಸರು 5 ಜನರನ್ನು ಹಿಡಿದು, ನಮ್ಮ ಅಂಗಡಿಯಲ್ಲಿ ಆಗಿದ್ದ ದರೋಡೆಗಾಗಿ ತೋರಿಸಿದ್ದರು. ನಾನು ಅವರನ್ನು ನೋಡಿದರೆ ಗುರುತಿಸಬಲ್ಲೆ.

ಪಾಟಿಸವಾಲುಃ ಆರೋಪಿತರು ತಲೆತಪ್ಪಿಸಿಕೊಂಡಿದ್ದರಿಂದ ಇಲ್ಲ ಎಂದು ತೆಗೆದುಕೊಂಡಿತು.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.